KADG320080812024

<u>ಪ್ರಧಾನ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂ. ನ್ಯಾಯಾಲಯ, ಹರಿಹರ.**</u>

**ಉಪಸ್ಥಿತರುಃ** ಶ್ರೀ ಬೀರಪ್ಪ ಕಾಂಬ್ಳೆ,

**ಬಿ.ಎ,. ಎಲ್‌ಎಲ್.ಬಿ .**

ಸಿವಿಲ್ **ನ್ಯಾಯಾಧೀಶರು**

**ಮತ್ತು ಪ್ರ. ದ. ನ್ಯಾ ದಂ. ನ್ಯಾಯಾಲಯ, ಹರಿಹರ**

**<u>ಅಪರಾಧ ಪ್ರಕರಣ ಸಂಖ್ಯೆಃ 6856/2024</u>**

**ದಿನಾಂಕ 09 ನೇ** ಜುಲೈ, **2026**

**ಫಿರ್ಯಾದುದಾರರುಃ**

ಸರ್ಕಾರದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ,
ಹರಿಹರ.

**(ಅಭಿಯೋಜನ ಪರ., ಸರ್ಕಾರಿ ಸಹಾಯಕ ಅಭಿಯೋಜಕರು)**

**ವಿರುದ್ಧ**

**ಆರೋಪಿತರುಃ**

1) ಕೊಂಡಜ್ಜಿ ಸುರೇಶಪ್ಪ ತಂದೆ ಸಿದ್ದಪ್ಪ, 53 ವರ್ಷ, ಕೃಷಿಕರು,
   ವಾಸಃ ದೇಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.
2) ಕೃಷ್ಣ ಯಾನೇ ಕಾಂತ ತಂದೆ ಹನುಮಂತಪ್ಪ, 29 ವರ್ಷ, ಕೃಷಿಕರು,
   ವಾಸಃ ಡೋರ್ ನಂ.129, 2 ನೇ ಬ್ಲಾಕ್, ವಾರ್ಡ್‌ನಂಃ10,
   ಹೊನ್ನಾಳ್ಳಿ ಟೌನ್, ದಾವಣಗೆರೆ.

3) ರಘುವೀರ ತಂದೆ ಜೋಗಳಿ ಕೆಂಚಪ್ಪ, 26 ವರ್ಷ, ಕೂಲಿ,
ವಾಸಃ ಡೋರ್ ನಂ.150, ಚಿಕ್ಕಬಿದರೆ ಕ್ಯಾಂಪ್,
ಹರಿಹರ ತಾಲ್ಲೂಕು, ದಾವಣಗೆರೆ.

4) ಲಕ್ಷ್ಮಣ ತಂದೆ ತಿಪ್ಪೇಶಪ್ಪ, 29 ವರ್ಷ, ಕೃಷಿಕರು,
ವಾಸಃ ಎ ಪಿ ಎಂ ಸಿ ಹತ್ತಿರ, 2 ನೇ ಮೇನ್, 4 ನೇ ಕ್ರಾಸ್,
ಭರತ್ ಕಾಲೋನಿ, ದಾವಣಗೆರೆ.

5) ಹನುಮಂತಪ್ಪ ತಂದೆ ಸುರೇಶಪ್ಪ, 29 ವರ್ಷ, ಕೃಷಿಕರು,
ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.

6) ಮೋಹನ ಯಾನೇ ಮಹದೇವ ತಂದೆ ಕೊಂಡಜ್ಜಿ ಸುರೇಶಪ್ಪ, 26 ವರ್ಷ, ಕೃಷಿಕರು,
ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.

7) ಮಂಜುನಾಥ ತಂದೆ ಕೊಂಡಜ್ಜಿ ಸುರೇಶಪ್ಪ, 25 ವರ್ಷ, ಕೃಷಿಕರು,
ವಾಸಃ ದೀಟೂರು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.

**(ಆರೋಪಿತರ ಪರ ಶ್ರೀ ಪಿ.ಎಸ್.ಜೆ., ವಕೀಲರು)**

| | |
|---|---|
| ಘಟನೆ ಸಂಭವಿಸಿದ ದಿನಾಂಕ | 24.08.2024 |
| ವರದಿಯಾದ ದಿನಾಂಕ | 26.08.2024 |
| ಫಿರ್ಯಾದಿದಾರರ ಹೆಸರು | ಅಸುಂಡಿ ರುದ್ರಪ್ಪ |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 03.09.2025 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 12.02.2026 |
| ಆರೋಪಗಳು | ಭಾರತೀಯ ನ್ಯಾಯಾ ಸಂಹಿತೆ ಕಲಂ. 115(1), 118(1), 126(1), 351, 352 ಸಹವಾಚಕ ಕಲಂ 190 ರಡಿಯಲ್ಲಿ |
| ನ್ಯಾಯಾಧೀಶರು ತೀರ್ಮಾನ | ನಿರ್ದೋಷಿಯೆಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 09.07.2026 |

**::ತೀರ್ಪು::**

ಪ್ರಸ್ತುತ ಪ್ರಕರಣವನ್ನು ಆರಕ್ಷಕ ಉಪನಿರೀಕ್ಷಕರು, ಗ್ರಾಮಾಂತರ ಪೊಲೀಸ್ ಠಾಣೆ, ಹರಿಹರ ಇವರು ಆರೋಪಿತರ ವಿರುದ್ಧ ಭಾರತೀಯ ನ್ಯಾಯಾ ಸಂಹಿತೆ ಕಲಂ. 115(1), 118(1), 126(1), 351, 352 ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನ ಪಕ್ಷದವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕಃ 24.08.2024 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಹರಿಹರ ಗ್ರಾಮಾಂತರ ಠಾಣಾ ವ್ಯಾಪ್ತಿಯ ದೀಟೂರು ಗ್ರಾಮದ ಮಹೇಶ್ವರ ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಹೋಗುತ್ತಿದ್ದ ಸಾಕ್ಷಿ.1 ಅಸುಂಡಿ ರುದ್ರಪ್ಪನಿಗೆ ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಜಮೀನು ವಿಚಾರದಲ್ಲಿ ಜಗಳ ತೆಗೆದು, ಸೂಳೇಮಗನೇ, ಮಿಂಡ್ರಿ ಮಗನೆಂದು ಎಲ್ಲಾರು ಬೈದು ಕೈಕಾಲುಗಳಿಂದ ಹೊಡಿಬಡಿ ಮಾಡಿ, 1 ನೇ ಆರೋಪಿ ಮರದ ಕೋಲಿನಿಂದ, 6 ನೇ ಆರೋಪಿ ಕಲ್ಲಿನಿಂದ ಸಾಕ್ಷಿ.1 ರವರಿಗೆ ಹಲ್ಲೆ ವ ೂಡಿ, ಸಾಮಾನ್ಯ ಸ್ವರೂಪದ ಗಾಯ ಮಾಡಿ, ಎಲ್ಲಾರೂ ಸೇರಿ ಕೈಕಾಲುಗಳಿಂದ ಹಲ್ಲೆ ಮಾಡಿ, ಕೈಯಿಂದ ಗುದ್ದಿ ಮೈಕೈನೋವುಂಟು ಮಾಡಿ ಪ್ರಾಣ ಬೆದರಿಕೆ ಹಾಕಿರುವುದು ಆರೋಪಿತರ ವಿರುದ್ಧ ತಮ್ಮ ಠಾಣಾ ಮೊಕದ್ದಮೆ 133/2024 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳು ತನಿಖೆಯನ್ನು ಮುಂದುವರೆಸಿ ಗುನ್ಹಾ ಸ್ಥಳಕ್ಕೆ ಭೇಟಿ ನೀಡಿ ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು,

ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ 115(1), 118(1), 126(1), 351, 352 ಸಹವಾಚಕ ಕಲಂ 190 ರಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಪ್ರಕರಣವನ್ನು ಸಂಜ್ಞೆಗೆ ತೆಗದುಕೊಂಡು ಆರೋಪಿತರಿಗೆ ಸಮನ್ಸ್ ನೀಡಲಾಗಿ ಆರೋಪಿತರು ತಮ್ಮ ವಕೀಲರ ಮೂಲಕ ಹಾಜಾರಾಗಿ ಜಾಮೀನು ಪಡೆದಿರುತ್ತಾರೆ. ಆ ನಂತರ ದೋಷಾರೋಪಣ ಪಟ್ಟಿ ಮತ್ತು ಅದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ಭಾರತೀಯ ನ್ಯಾಯ ಸಂಹಿತೆ ಕಲಂ 230 ರ ಅಡಿಯಲ್ಲಿ ಆರೋಪಿತರಿಗೆ ನೀಡಿದ್ದು ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಲು ಸಾಕಷ್ಟು ಆಧಾರಗಳು ಇವೆ ಎಂದು ಪೂರ್ವಭಾವನೆಯನ್ನು ಹೊಂದಿ ಆರೋಪವನ್ನು ರಚಿಸಿ ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಆರೋಪಿತರು ಆರೋಪವನ್ನು ಅಲ್ಲಗಳೆಯುತ್ತಾ ತಾನು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು ಎಂದು ಕೇಳಿಕೊಂಡ ಮೇರೆಗೆ ಅಭಿಯೋಜನ ಪಕ್ಷದ ಪರವಾಗಿ ಸಾಕ್ಷಿಗಳ ವಿಚಾರಣೆ ಮಾಡಲಾಗಿರುತ್ತದೆ.

4. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಹೊರಿಸಿರುವ ದೋಷಾರೋಪಣೆಯನ್ನು ರುಜುವಾತು ಪಡಿಸಲು 6 ಜನ ಸಾಕ್ಷಿದಾರರನ್ನು ಫ್ರಾ.ಸಾ.1 ರಿಂದ ಫ್ರಾ.ಸಾ.6 ಎಂದು, 8 ದಾಖಲೆಗಳನ್ನು ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷ್ಯಗಳನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

5. ಉಭಯ ಪಕ್ಷಗಳ ಪರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರ ಹಾಗೂ ಆರೋಪಿತರ ಪರ ಮಾನ್ಯ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತಗಳನ್ನು ಪರಿಶೀಲಿಸಲಾಯಿತು.

6. ಈ ಪ್ರಕರಣದಲ್ಲಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆಃ

**–: ಅಂಶಗಳು: –**

1. ದಿನಾಂಕ 24.08.2024 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಗ್ರಾಮಾಂತರ ಠಾಣಾ ವ್ಯಾಪ್ತಿಯ ದೀಟೂರು ಗ್ರಾಮದ ಮಹೇಶ್ವರ ದೇವಸ್ಥಾನಂ ಮುಂದಿನ ರಸ್ತೆಯಲ್ಲಿ ಹಾದುಹೋಗುತ್ತಿದ್ದ ಚಾಸಾ.1 ಅಸುಂಡಿ ರುದ್ರಪ್ಪನಿಗೆ ಆರೋಪಿತರು ಸಮಾನ ಉದ್ದೇಶದಿಂದ, ಚಾಸಾ.1 ರವರ ಮೇಲೆ ಅಕ್ರಮ ಗುಂಪು ಕಟ್ಟಿಕೊಂಡು ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಅಡ್ಡಗಟ್ಟಿ ತಡೆದು ನಿಲ್ಲಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ. 126(1) ಸಹ ಕಲಂ.190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ ?

2. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಜಗಳ ಮಾಡುವ ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಸೂಳೆಮಗನೇ, ಮಿಂಡ್ರಿ ಮಗನೆಂದು ಅವಾಚ್ಯ ಶಬ್ದಗಳಿಂದ ಬೈದಾಡಿ, ಅವರ ಮಾನಕ್ಕೆ ಹಾನಿ ಉಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ

ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ ?

3. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಕೈ ಕಾಲುಗಳಿಂದ ಹೊಡಿಬಡಿ ಮಾಡಿ ಸಾಮಾನ್ಯ ಸರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ. 115(1) ಸಹ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ ?

4. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ 1 ನೇ ಆರೋಪಿತನಾದ ನೀನು ಮರದ ಕೋಲಿನಿಂದ, 6 ನೇ ಆರೋಪಿತನಾದ ನೀನು ಕಲ್ಲಿನಿಂದ ಚಾಸಾ.1 ರವರಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ. 118(1) ಸಹ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ ?

5. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ. 351 ಸಹ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ

ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ ?

6. ಏನು ಆದೇಶ ಅಥವಾ ಶಿಕ್ಷೆ ?

7. ಅಭಿಯೋಜನಾ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 ರಿಂದ 5 – ನಕಾರಾತ್ಮಕವಾಗಿ**
**ಅಂಶ 6 – ಅಂತಿಮ ಆದೇಶನುಸಾರವಾಗಿ**

**:ಕಾರಣಗಳು:**

8. **ಅಂಶ 1 ರಿಂದ 5** :- ಅಂಶ 1 ರಿಂದ 5 ಇವು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೆ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

9. ಕ್ರಿಮಿನಲ್ ಮೊಖದ್ದಮೆಗಳಲ್ಲಿ ರುಜುವಾತಿನ ಭಾರವು ಅಭಿಯೋಜನೆಯ ಮೇಲೆ ಇರುತ್ತದೆ. ಅಂತ ರುಜುವಾತಿನಿ ಭಾರವನ್ನು ಯಕ್ತಾಸಂಶಾಯತೀತಾವಾಗಿ ರುಜುವಾತು ಪಡಿಸತಕ್ಕದ್ದು. ಆರೋಪಿತರು ಆರೋಪ ರುಜುವಾತು ಆಗುವವರೆಗೂ ಮುಗ್ದನೆಂದು ಪರಿಗಣಿಸಬೇಕೆಂಬ ಪೂರ್ವಭಾವನೆ ಇದೆ. ಆರೋಪಿತರು ತಮ್ಮ ಪರವಾಗಿ ಯಾವುದೇ ರೀತಿಯ ಪ್ರತಿರಕ್ಷಣೆಯನ್ನು ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಆರೋಪಿತರ ಕೆಲಸ ಅಭಿಯೋಜನೆಯ

ಸಾಕ್ಷ್ಯಗಳಲ್ಲಿ ಸಂಶಯವನ್ನು ಹುಟ್ಟು ಹಾಕುವುದು ಇರುತ್ತದೆ. ಅಭಿಯೋಜನೆಯು ತನ್ನ ವಾದವನ್ನು ರುಜುವಾತು ಪಡಿಸುವ ಉದ್ದೇಶದಿಂದ ತಮ್ಮ ಪರವಾಗಿ ಫ್ರಾ.ಸಾ.1 ರಿಂದ ಫ್ರಾ.ಸಾ.6 ರವರನ್ನು ಸಾಕ್ಷಿಗೆ ಒಳಪಡಿಸಿಕೊಂಡು ನಿ.ಪಿ.1 ರಿಂದ ನಿ.ಪಿ.8 ರವರೆಗೆ ಹಾಗೂ ಮುದ್ದೆಮಾಲು 1 ಮತ್ತು 2 ಎಂದು ಗುರುತಿಸಿಕೊಂಡಿರುತ್ತಾರೆ.

**10.** ನಿ.ಪಿ.1/ದೂರು, ನಿ.ಪಿ.1(ಎ)/ಫ್ರಾ.ಸಾ.1 ರವರ ಸಹಿ, ನಿ.ಪಿ.1(ಬಿ)/ಫ್ರಾ.ಸಾ.5 ರವರ ಸಹಿ, ನಿ.ಪಿ.2/ಕೃತ್ಯ ಸ್ಥಳದ ಪಂಚನಾಮೆ, ನಿ.ಪಿ./2(ಎ) ರಿಂದ ನಿ.ಪಿ.2(ಸಿ)/ ಸಹಿಗಳು, ನಿ.ಪಿ.3 ಮತ್ತು ನಿ.ಪಿ.4 – ಛಾಯ ಚಿತ್ರಗಳು, ನಿ.ಪಿ.5/ನೋಟೀಸ್, ನಿ.ಪಿ./5(ಎ) ಮತ್ತು ನಿ.ಪಿ.5(ಬಿ)/ಸಹಿಗಳು, ನಿ.ಪಿ.6/ಪ್ರಥಮ ವರ್ತಮಾನ ವರದಿ, ನಿ.ಪಿ./6(ಎ)/ಸಹಿ, ನಿಪಿ.7/ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 63(4) ರ ಅಡಿ ಪ್ರಮಾಣ ಪತ್ರ, ನಿ.ಪಿ./7(ಎ)/ಸಹಿ, ನಿ.ಪಿ.8/ಗಾಯದ ಪ್ರಮಾಣ ಪತ್ರ, ನಿ.ಪಿ./8(ಎ) ಮತ್ತು ನಿ.ಪಿ.8(ಬಿ)/ ಸಹಿಗಳು ಹಾಗೂ ಎಂ.ಓ.1 ಮತ್ತು 2 ನ್ನು ಗುರುತಿಸಿಕೊಂಡಿರಲಾಗಿರುತ್ತದೆ.

**11.** ಚಾಸಾ.1/ಫ್ರಾಸಾ.1 ರವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 24.08.2024 ರಂದು ಸಂಜೆ 6.30 ಗಂಟೆಗೆ ದೇವಸ್ಥಾನದ ರಸ್ತೆಯಿಂದ ಮನೆಗೆ ಹೋಗುತ್ತಿದ್ದಾಗ ಸುರೇಶ, ಮಂಜ, ಮಾದೇವ, ರಘು, ಕೃಷ್ಣ ಮತ್ತು ಇತರರು ಬಂದು ಏಕಾಏಕಿ ತನ್ನನ್ನು ತರುಬಿ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕಟ್ಟಿಗೆ ಮತ್ತು ಕಲ್ಲುಗಳಿಂದ ತನ್ನನ್ನು ಹೊಡೆದರು. ಸುರೇಶಪ್ಪ ಮತ್ತು ಅವರ ಮಕ್ಕಳು ತನಗೆ ಕಲ್ಲಿನಿಂದ ಮತ್ತು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದರು. ಸದರಿ ಸಂದರ್ಭದಲ್ಲಿ ಸುರೇಶಪ್ಪ ಮತ್ತು ಅವರ ಮಕ್ಕಳು ನೀನು ದೂರು ನೀಡಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು.

ಅದೇ ದಿನ ರಾತ್ರಿ 10.30 ರ ಸುಮಾರು ಹರಿಹರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು 2 ದಿನಗಳ ನಂತರ ತಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ತಾನು ದೂರು ನೀಡಿದ ಮಾರನೇ ದಿನ ಪೊಲೀಸರು ಮದ್ಯಾಹ್ನ 1 ರಿಂದ 1.30 ರ ಸುಮಾರು ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿ ಘಟನೆ ಬಗ್ಗೆ ಬರೆದುಕೊಂಡರು. ಸದರಿ ಸಂದರ್ಭದಲ್ಲಿ ಚಾಸಾ.2 ಮತ್ತು 3 ರವರು ಇದ್ದರು. ಸದರಿ ಸಂದರ್ಭದಲ್ಲಿ ಛಾಯಚಿತ್ರ ತೆಗೆದಿರುತ್ತಾರೆ. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಕೋಲು ಮತ್ತು ಕಲ್ಲನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ.

**12.** ಚಾಸಾ.2/ಪ್ರಾಸಾ.2 ರವರು ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಕೃತ್ಯ ನಡೆದ ಸ್ಥಳದ ಪಂಚನಾಮೆಯ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 24.03.2024 ರಂದು ಸಂಜೆ 6.30 ಗಂಟೆಗೆ ಚಾಸಾ.1 ಮತ್ತು 1 ನೇ ಆರೋಪಿಯ ನಡುವೆ ಜಗಳ ಆಗುತ್ತಿತ್ತು. ಆಗ ತಾನು ಬಂದು ಜಗಳವನ್ನು ಬಿಡಿಸಿದೆನು. ಚಾಸಾ.1 ಮತ್ತು 1 ನೇ ಆರೋಪಿ ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು. 1 ನೇ ಆರೋಪಿ ಮತ್ತು ಅವರ ಕಡೆಯವರು ಕೈ ಮತ್ತು ಕಲ್ಲಿನಿಂದ ಹೊಡೆಯುತ್ತಿದ್ದರು. 1 ನೇ ಆರೋಪಿಯೊಂದಿಗೆ ಇದ್ದವರು ಹೆಸರು ತನಗೆ ಗೊತ್ತಿಲ್ಲ. ಸದರಿ ಜಗಳದಲ್ಲಿ ಅರೋಪಿ ಚಾಸಾ.1 ರವರಿಗೆ ಚಾಸಾ.1 ರವರು ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಗಲಾಟೆಯಾದ 2–3 ದಿನಗಳ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಪೊಲೀಸರು ಗಲಾಟೆ ಬಗ್ಗೆ ವಿಚಾರಣೆ ಮಾಡಿ ತನಗೆ ಸಹಿ ಮಾಡು ಎಂದು ಹೇಳಿದ್ದರು. ಆಗ ತಾನು ಸಹಿ ಮಾಡಿದ್ದೇನೆ ಸದರಿ ಸಂದರ್ಭದಲ್ಲಿ ತನ್ನೊಂದಿಗೆ ಚಾಸಾ.1 ಮತ್ತು 3 ರವರು ಇದ್ದರು. ಸ್ಥಳದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ.

**13.** ಚಾಸಾ.4/ಫ್ರಾಸಾ.3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 24.08.2024 ರಂದು ಸಂಜೆ 6.00 ಗಂಟೆಗೆ ಸುರೇಶಪ್ಪ ಮತ್ತು ಅವರ ಮಕ್ಕಳು ತನ್ನ ತಂದೆ ಮೇಲೆ ಹಲ್ಲೆ ಮಾಡಿದ್ದರು. ತನ್ನ ತಂದೆ ಮಹೇಶ್ವರ ದೇವಸ್ಥಾನದ ಬಳಿ ನಿಂತುಕೊಂಡಾಗ ಸುಮಾರು 7-8 ಜನ ಬಂದು ಹಲ್ಲೆ ಮಾಡಿರುತ್ತಾರೆ. ಸದರಿ ಸಂದರ್ಭದಲ್ಲಿ ತಾನು ಮಹೇಶ್ವರ ದೇವಸ್ಥಾನಕ್ಕೆ ಹೋಗುತ್ತಿದ್ದೆನು. ಸದರಿ ಸಂದರ್ಭದಲ್ಲಿ ತನ್ನ ತಂದೆಗೆ ಕೊಂಡಜ್ಜಿ ಸುರೇಶ, ರಘು, ಮಂಜುನಾಥ, ಮಹಾದೇವ ಇನ್ನು ಇಬ್ಬರು ಹಲ್ಲೆ ಮಾಡುತ್ತಿದ್ದರು. ಮಹಾದೇವ ಎನ್ನುವವರು ಕಲ್ಲು ಮತ್ತು ಕೋಲಿನಿಂದ ತನ್ನ ತಂದೆಗೆ ಬೆನ್ನಿಗೆ ಮತ್ತು ತಲೆಗೆ ಹೊಡೆದರು. ಉಳಿದವರು ಕೈಯಿಂದ ಹೊಡೆಯುತ್ತಿದ್ದರು. ಸದರಿಯವರೆಲ್ಲರೂ ತನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಸುರೇಶ ಮತ್ತು ಅವರ ಮಕ್ಕಳು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ತನ್ನ ತಂದೆಗೆ ಜೀವ ಬೆದರಿಕೆ ಹಾಕಿದರು. ಸದರಿ ಹಲ್ಲೆಯಿಂದ ತನ್ನ ತಂದೆಗೆ ತಲೆಗೆ, ಬೆನ್ನು ಮತ್ತು ಸೊಂಟಕ್ಕೆ ಪೆಟ್ಟಾಗಿದ್ದು, ತನ್ನ ತಂದೆಯನ್ನು ತಾನೇ ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ನಂತರ ದಿನಾಂಕಃ 25.08.2024 ರಂದು ತನ್ನ ತಂದೆ ಠಾಣೆಗೆ ದೂರು ನೀಡಿರುತ್ತಾರೆ. ಈ ಎಲ್ಲಾ ವಿಚಾರವಾಗಿ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**14.** ಚಾಸಾ.3/ಫ್ರಾಸಾ.4 ರವರು ಘಟನಾ ಸ್ಥಳದ ಪಂಚರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 27.08.2024 ರಂದು ಮಧ್ಯಾಹ್ನ 1.30 ಗಂಟೆ ಸುಮಾರು ದೀಟೂರು ಗ್ರಾಮದ ಮಹೇಶ್ವರ ದೇವಸ್ಥಾನದ ಹತ್ತಿರ ಚಾಸಾ.1 ಮತ್ತು 1 ನೇ ಆರೋಪಿಯ ನಡುವೆ ಆದ ಗಲಾಟೆಯ ವಿಚಾರವಾಗಿ ಪಂಚನಾಮೆ ಜರುಗಿಸಲು ಬಂದ ಸಂದರ್ಭದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಂದರ್ಭದಲ್ಲಿ ತಾನು

ಚಾಸಾ.1 ಮತ್ತು 2 ರವರು ಇದ್ದೆವು. ಸದರಿ ಕಾಲಕ್ಕೆ ಪೊಲೀಸರು ಛಾಯಾಚಿತ್ರ ತೆಗೆದಿರುತ್ತಾರೆ. ಸದರಿ ಸಂದರ್ಭದಲ್ಲಿ ಪೊಲೀಸರು ಒಂದು ಕಲ್ಲು ಮತ್ತು ಕಟ್ಟಿಗೆಯನ್ನು ತೆಗೆದುಕೊಂಡು ಛಾಯಚಿತ್ರ ತೆಗೆಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**15.** ಚಾಸಾ.6/ಫ್ರಾಸಾ.6 ರವರು ವೈದ್ಯಾಧಿಕಾರಿಗಳಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 24.08.2024 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ರುದ್ರಪ್ಪ ತಂದೆ ಮಲ್ಲೇಶಪ್ಪ, ವಯಸ್ಸು 56 ವರ್ಷ, ವಾಸಃ ಹರಿಹರ ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಅವರು ಹೇಳಿದಂತೆ ತಲೆಯ ಮೇಲ್ಬಾಗದಲ್ಲಿ ನೋವು ಇದ್ದು, ಆದರೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದಿಲ್ಲ. ಸದರಿ ಗಾಯಗಳು ಸಾದಾಸ್ವರೂಪದ ಗಾಯಗಳೆಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**16.** ಚಾಸಾ.7/ಫ್ರಾಸಾ.5 ರವರು ತನಿಖಾಧಿಕಾರಿಗಳಾರಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 26.08.2024 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 5.30 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಃ 133/2024 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ನಿವೇದಿಸಿಕೊಂಡಿದ್ದೇನೆ. ಅದೇ ದಿನ ಚಾಸಾ.2 ಮತ್ತು 3 ರವರಿಗೆ ನೋಟೀಸ್ ನೀಡಿ ಪಂಚನಾಮೆಗೆ ಸಹಕರಿಸಲು ಕೇಳಿಕೊಂಡಿದ್ದೇವೆ. ದಿನಾಂಕಃ 27.08.2024 ರಂದು ಚಾಸಾ.2 ಮತ್ತು 3 ರವರ ಸಮಕ್ಷಮ ದೀಟೂರು ಮಹೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮದ್ಯಾಹ್ನ 1.00 ರಿಂದ 1.45 ರವರಗೆ ಕೃತ್ಯ ಸ್ಥಳದ ಪಂಚನಾಮೆ ಜರುಗಿಸಿರುತ್ತೇನೆ. ಸದರಿ ಕಾಲಕ್ಕೆ ಒಂದು ಕಟ್ಟಿಗೆ ಮತ್ತು ಕಲ್ಲನ್ನು ವಶಪಡಿಸಿಕೊಂಡಿರುತ್ತೇನೆ. ಜಪ್ತು ಪಡಿಸಿಕೊಂಡ

ಮಾಲನ್ನು ಪಿ.ಎಫ್. ನಂಃ84/2024 ರಡಿ ನೋಂದಾಯಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ.2 ಮತ್ತು 4 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ.5 ರವರಿಂದ ಕಲಂ.63(4) ಭಾರತೀಯ ಸಾಕ್ಷ್ಯ ಅಧಿನಿಯಮ ಅಡಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿನಾಂಕಃ 15.10.2024 ರಂದು ಚಾಸಾ.6 ರವರಿಂದ ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ದಿನಾಂಕಃ 03.11.2024 ರಂದು ಆರೋಪಿತರು ನಿರೀಕ್ಷಣಾ ಜಾಮೀನಿನ ಆದೇಶದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡು ಆರೋಪಿತರನ್ನು ಬಿಡುಗಡೆ ಮಾಡಿರುತ್ತೇನೆ. ನಂತರ ಆರೋಪಿತರ ವಿರುದ್ಧ ಆರೋಪ ಸಾಭೀತಾಗಿದ್ದರಿಂದ ಅವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**17.** ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ತಮ್ಮ ವಾದದಲ್ಲಿ ಆರೋಪಿತರು ಅಕ್ರಮ ಗುಂಪುಕಟ್ಟಿಕೊಂಡು ಬಂದು ಅಪರಾಧ ಎಸಗಿರುವ ಉದ್ದೇಶದಿಂದ ಕಲ್ಲು ಮತ್ತು ಕಟ್ಟಿಗೆಯನ್ನು ಹಿಡಿದುಕೊಂಡು ಬಂದು ಚಾಸಾ.1 ರವರನ್ನು ಅಡ್ಡಗಟ್ಟಿ ನಿಲ್ಲಿಸಿ ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಈ ಕುರಿತಂತೆ ಅಭಿಯೋಜನೆಯ ಎಲ್ಲಾ ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಆರೋಪಿತರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**18.** ಆರೋಪಿ ಪರ ವಕೀಲರಾದ ಪಿ.ಎಸ್.ಜೆ., ವಕೀಲರು ತಮ್ಮ ವಾದದಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿರುವುದಿಲ್ಲ. ಚಾಸಾ.1 ರವರ ಪ್ರಕಾರ ಘಟನೆಯು ದಿನಾಂಕಃ 24.03.2024 ರಂದು ಆಗಿದ್ದು ಆದರೆ ದೂರನ್ನು 5 ತಿಂಗಳ

ನಂತರ ಅಂದರೆ ದಿನಾಂಕಃ 26.08.2024 ರಂದು ಸಲ್ಲಿಸಿರುತ್ತಾರೆ. ಅದೇ ರೀತಿ ವೈದ್ಯರು ದಿನಾಂಕಃ 24.08.2024 ರ ಘಟನೆಗೆ ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈ ಒಂದು ದಾಖಲೆ ಆರೋಪಿತರ ವಿರುದ್ಧ ಚಾಸಾ.1 ರವರು ಸುಳ್ಳು ದೂರನ್ನು ನೀಡಿರುತ್ತಾರೆ ಎಂದು ಸ್ಪಷ್ಟವಾಗುತ್ತದೆ. ಅದೇ ರೀತಿ ಅಭಿಯೋಜನೆಯು ಪ್ರತ್ಯಕ್ಷ ಸಾಕ್ಷಿದಾರನನ್ನಾಗಿ ಚಾಸಾ.2 ಮತ್ತು 4 ರವರನ್ನು ಸಾಕ್ಷಿಗೆ ಒಳಪಡಿಸಿದ್ದು, ಚಾಸಾ.4, ಚಾಸಾ.1 ರವರ ಮಗನಾಗಿರುತ್ತಾನೆ ಹಾಗೂ ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರ ತಮ್ಮ ಪಾಟೀ ಸವಾಲಿನಲ್ಲಿ ಆರೋಪಿತರು ಎಲ್ಲೆಲ್ಲಿ ಹೊಡೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಿರುವ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಅದ್ದರಿಂದ ಆರೋಪಿತರನ್ನು ಬಿಡುಗಡೆಗೊಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**19.** ಈ ಮೇಲಿನ ವಾದ ವಿವಾದಗಳನ್ನು ಆಲಿಸಿದ ನಂತರ ಹಾಗೂ ಕಡತವನ್ನು ಪರಿಶೀಲಿಸಿದ ನಂತರ ಅಭಿಯೋಜನೆಯ ಪ್ರಕರಣವೇನೆಂದರೆ ದಿನಾಂಕಃ 24.03.2024 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಚಾಸಾ.1 ರವರು ದೀಟೂರು ಗ್ರಾಮದ ಮಹೇಶ್ವರ ದೇವಸ್ಥಾನದ ಮುಂದಿನ ರಸ್ತೆಯಲ್ಲಿ ಹಾದುಹೋಗುತ್ತಿದ್ದಾಗ ಆರೋಪಿತರೆಲ್ಲರೂ ಸಮಾನ ಉದ್ದೇಶ ಹೊಂದಿ ಚಾಸಾ.1 ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈ-ಕಾಲುಗಳಿಗೆ ಹೊಡೆಬಡೆ ಮಾಡಿ ಮರದ ಕೋಲಿನಿಂದ ಮತ್ತು ಕಲ್ಲಿನಿಂದ ಹೊಡೆದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ.1 ರವರು ಗದಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಗ್ರಾಮಾಂತರ ಪೊಲೀಸರು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ

ಕಲಂ. 126(1), 352, 115(1), 118(1), 351 ಸಹ ಕಲಂ 190 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

20. ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಿರುವ ಆರೋಪಗಳನ್ನು ರುಜುವಾತುಪಡಿಸುವ ಉದ್ದೇಶದಿಂದ ಫ್ರಾಸಾ.1 ರಿಂದ ಫ್ರಾಸಾ.6 ರವರನ್ನು ಸಾಕ್ಷಿಗೆ ಒಳಪಡಿಸಿಕೊಂಡಿರುತ್ತಾರೆ. ಚಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 24.08.2024 ರಂದು ಸಂಜೆ 6.30 ಗಂಟೆಗೆ ದೇವಸ್ಥಾನದ ರಸ್ತೆಯಿಂದ ಮನೆಗೆ ಹೋಗುತ್ತಿರುವಾಗ ಸುರೇಶ, ಮಂಜ, ಮಾದೇವ, ರಘು, ಕೃಷ್ಣ ಮತ್ತು ಇತರರು ಬಂದು ಏಕಾಏಕಿ ತನ್ನನ್ನು ತರುಬಿ ಅವಾಚ್ಯ ಶಬ್ದಗಳಿಂದ ಬೈಯ್ದು ಕಟ್ಟಿಗೆ ಮತ್ತು ಕಲ್ಲುಗಳಿಂದ ತನ್ನನ್ನು ಹೊಡೆದರು. ಸುರೇಶಪ್ಪ ಮತ್ತು ಅವರ ಮಕ್ಕಳು ತನಗೆ ಕಲ್ಲಿನಿಂದ ಮತ್ತು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದರು. ನಂತರ ಸುರೇಶಪ್ಪ ಮತ್ತು ಅವರ ಮಕ್ಕಳು ದೂರು ನೀಡಿದರೆ ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಪಾಟೀ ಸವಾಲಿನಲ್ಲಿ ನಿಪಿ.1 ರಲ್ಲಿ ಘಟನೆ ದಿನಾಂಕಃ 24.03.2024 ರಂದು ನಮೂದು ಇದೆ ಎಂದರೆ ಸಾಕ್ಷಿಯು ಬರೆಯುವರು ತಪ್ಪು ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿಪಿ.1 ದೂರನ್ನು ದಿನಾಂಕಃ 26.08.2024 ರಂದು ನೀಡಿದ್ದೀರಿ ಎಂದರೆ ಸಾಕ್ಷಿಯು ದಿನಾಂಕ ನಿಖರವಾಗಿ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.3 ಮತ್ತು 4 ನ್ನು ದಿನಾಂಕಃ 27.08.2024 ರಂದು ತೆಗೆದಿರುತ್ತಾರೆ ಎಂದರೆ ಸರಿ. ನಿಪಿ.1 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ತಿಳಿದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಘಟನೆ ಬಗ್ಗೆ ಮಾತ್ರ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಈ ಪಾಟೀ ಸವಾಲಿಗೆ ಸಂಬಂಧಿಸಿದಂತೆ ಆರೋಪಿ ಪರ ವಕೀಲರು ತಮ್ಮ ವಾದದಲ್ಲಿ ಘಟನೆಯಾದ ಸುಮಾರು 5 ತಿಂಗಳ ನಂತರ ದೂರು ನೀಡಿರುತ್ತಾರೆ ಎಂದು ವಾದ ಮಂಡಿಸಿರುತ್ತಾರೆ.

ಈ ಕುರಿತಂತೆ ನಿಪಿ.1 ದೂರನ್ನು ಕೂಲಂಕುಷವಾಗಿ ಅವಲೋಕಿಸಿದಾಗ ದೂರಿನಲ್ಲಿ ದಿನಾಂಕಃ 24.03.2024 ಎಂದು ನಮೂದಾಗಿದ್ದು, ದೂರನ್ನು ದಿನಾಂಕಃ 26.08.2024 ರಂದು ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇನ್ನು ದೂರು ನೀಡಲು ತಡವಾದ ಬಗ್ಗೆ ನಿಪಿ.6 ರಲ್ಲಿ ತನಿಖಾಧಿಕಾರಿಯು ಯಾವುದೇ ಕಾರಣಗಳನ್ನು ನಮೂದಿಸಿರುವುದಿಲ್ಲ. ಆದರೆ ಮತ್ತೊಂದು ವಿಚಿತ್ರ ಸಂಗತಿ ಎಂದರೆ ನಿಪಿ.1 ರಲ್ಲಿ ಘಟನೆಯು 24.03.2024 ಎಂದು ನಮೂದಿಸಿದ್ದರೆ ನಿಪಿ.6 ಪ್ರಥಮ ವರ್ತಮಾನ ವರದಿಯಲ್ಲಿ ಕೃತ್ಯ ನಡೆದ ದಿನಾಂಕವನ್ನು 24.08.2024 ಎಂದು ನಮೂದಿಸಲಾಗಿರುತ್ತದೆ. ಈ ಕುರಿತಂತೆ ತನಿಖಾಧಿಕಾರಿಯಾದ ಚಾಸಾ.7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಹಾಗೂ ಕೃತ್ಯ ನಡೆದ ದಿನಾಂಕಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಯು ಚಾಸಾ.1 ರವರ ಮರುಹೇಳಿಕೆ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ ಘಟನೆ ದಿನಾಂಕಃ 24.03.2024 ರಂದು ನಡೆದಿದ್ದು, ದೂರುದಾರರು ತಡವಾಗಿ ದೂರು ನೀಡಿರುತ್ತಾರೆ ಎಂದು ಸ್ಪಷ್ಟವಾಗುತ್ತದೆ ಆದರೆ ಸುಮಾರು 5 ತಿಂಗಳ ಕಾಲ ತಡವಾದ ಬಗ್ಗೆ ದೂರಿನಲ್ಲಾಗಲೀ ಅಥವಾ ಪ್ರಥಮ ವರ್ತಮಾನ ವರದಿಯಾಲ್ಲಾಗಲೀ ನಮೂದಿಸಿರುವುದಿಲ್ಲ. ಇನ್ನು ನಿಪಿ.8 ಗಾಯದ ಪ್ರಮಾಣ ಪತ್ರದಲ್ಲಿ ಚಾಸಾ.1 ರವರು ದಿನಾಂಕಃ 24.08.2024 ರಂದು ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಆದ್ದರಿಂದ ಘಟನೆ ನಡೆದ ದಿನಾಂಕಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯ ಪ್ರಕಾರ ಸಂಶಯದಿಂದ ಕೂಡಿರುತ್ತದೆ. ಇನ್ನೊಂದು ಸಂಶಯಕ್ಕೆ ಕಾರಣವೇನೆಂದರೆ, ಚಾಸಾ.2 ಪ್ರತ್ಯಕ್ಷದರ್ಶಿ ಘಟನೆಯು ದಿನಾಂಕಃ 24.03.2024 ರಂದು ಸಂಜೆ 6.30 ಗಂಟೆಗೆ ಆಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಇನ್ನು ಅಪರಾಧಗಳಿಗೆ ಸಂಬಂಧಿಸಿದಂತೆ ಚಾಸಾ.1

ರವರು ತಮ್ಮ ದೂರಿನಲ್ಲಿ ಸುರೇಶಪ್ಪನು ಮುಳ್ಳು ತಂತಿ ಕಟ್ಟಿಗೆ ಹಾಗೂ ಮಹದೇವನು ಕಲ್ಲಿನಿಂದ ಹೊಡೆಬಡೆ ಮಾಡಿರುತ್ತಾರೆ ಎಂದು ಹೇಳಿರುತ್ತಾನೆ. ಆದರೆ ತನ್ನ ಮುಖ್ಯ ವಿಚಾರಣೆಯಲ್ಲಿ ಸುರೇಶಪ್ಪ ಮತ್ತು ಅವರ ಮಕ್ಕಳು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದರು ಎಂದು ಹೇಳಿಕೆ ನೀಡಿರುತ್ತಾರೆ. ಗಾಯಗಳಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿಯಾದ ಚಾಸಾ.6 ರವರು ನಿಪಿ.8 ಗಾಯದ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಚಾಸಾ.1 ರವರನ್ನು ಪರೀಕ್ಷಿಸಿದಾಗ ತಲೆಯ ಮೇಲ್ಭಾಗದಲ್ಲಿ ಗಾಯ ಇದ್ದು, ಯಾವುದೇ ಮೂಳೆ ಮುರಿತವಾಗಿರುವುದಿಲ್ಲವೆಂದು ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ. ಅದೇ ರೀತಿ ಪಾಟೀ ಸವಾಲಿನಲ್ಲಿ ಚಾಸಾ.1 ರವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಗಾಯಗಳಿಗೆ ಸಂಬಂಧಿಸಿದಂತೆ ಚಾಸಾ.1 ರವರ ಹೇಳಿಕೆಯು ತನ್ನ ದೂರಿನಲ್ಲಿ ಇರುವ ಹೇಳಿಕೆಗೆ ವಿರುದ್ಧವಾಗಿ ಜೊತೆಗೆ ವೈದ್ಯಕೀಯ ದಾಖಲಾತಿಗೆ ವಿರುದ್ಧವಾಗಿರುತ್ತದೆ. ಅದೇ ರೀತಿ ಇನ್ನುಳಿದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.2 ರವರು ಜಗಳವನ್ನು ಬಿಡಿಸುವಾಗ ಚಾಸಾ.1 ಮತ್ತು ಆರೋಪಿತರು ಒಬ್ಬರಿಗೊಬ್ಬರು ಹೊಡೆದಾಡುತ್ತಿದ್ದರು. 1 ನೇ ಆರೋಪಿ ಮತ್ತು ಅವರ ಕಡೆಯವರು ಕೈ ಮತ್ತು ಕಲ್ಲಿನಿಂದ ಹೊಡೆಯುತ್ತಿದ್ದರು ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಪಾಟೀ ಸವಾಲಿನಲ್ಲಿ ತನ್ನ ಕಣ್ಣು ಸರಿಯಾಗಿ ಕಾಣುವುದಿಲ್ಲ. 1 ನೇ ಆರೋಪಿ ಮತ್ತು ಅವರ ಮಗ ಚಾಸಾ.1 ರವರಿಗೆ ಹೊಡೆದಿರುತ್ತಾರೆ. ಎಲ್ಲೆಲ್ಲಿ ಹೊಡೆದಿರುತ್ತಾರೆ ಎಂದು ತನಗೆ ಹೇಳಲು ಬರುವುದಿಲ್ಲ. ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಆರೋಪಿತರು 4 ಜನರು ಇದ್ದರು ಎಂದು ಹೇಳಿಕೆ ನೀಡಿರುತ್ತಾರೆ. ಅದೇ ರೀತಿ ಇನ್ನೊಬ್ಬ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.1 ರವರ ಮಗ ಚಾಸಾ.4 ಹರೀಶ ಆ ದಿನ ಸುಮಾರು 7–8 ಜನ ಬಂದು ಹಲ್ಲೆ ಮಾಡಿರುತ್ತಾರೆ. ಮಹದೇವ ಎನ್ನುವವರು ಕಲ್ಲು ಮತ್ತು ಕೋಲಿನಿಂದ ತನ್ನ ತಂದೆಗೆ ಬೆನ್ನಿಗೆ ಮತ್ತು ತಲೆಗೆ

ಹೊಡೆದರು ಉಳಿದವರು ಕೈಯಿಂದ ಹೊಡೆಯುತ್ತಿದ್ದರು. ಸದರಿ ಹಲ್ಲೆಯಿಂದ ತನ್ನ ತಂದೆಗೆ ತಲೆಗೆ, ಬೆನ್ನು ಮತ್ತು ಸೊಂಟಕ್ಕೆ ಪೆಟ್ಟಾಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಚಾಸಾ.1 ರವರ ಹೇಳಿಕೆಯಲ್ಲಿ ಮಹದೇವನು ಕಲ್ಲಿನಿಂದ ಹೊಡೆದಿರುತ್ತಾನೆ ಎಂದು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ ಚಾಸಾ.4 ರವರು ಹಿತಾಸಕ್ತಿ ಸಾಕ್ಷಿದಾರರು ಆಗಿದ್ದರು ಸಹ ಚಾಸಾ.1 ರವರಿಗೆ ವಿರುದ್ಧವಾಗಿ ಹೇಳಿಕೆ ನೀಡಿರುತ್ತಾರೆ. ಇನ್ನು ಅವಾಚ್ಯ ಶಬ್ದಗಳು ಬೈದಿರುವ ಬಗ್ಗೆ ಮತ್ತು ಜೀವ ಬೆದರಿಕೆ ಹಾಕಿರುವ ಬಗ್ಗೆ ಚಾಸಾ.1 ರವರು ದೂರಿನಲ್ಲಿ ಆರೋಪಿತರು ತನಗೆ ಸೂಳೇಮಗನೇ, ಮಿಂಡ್ರಿಮಗನೇ ಎಂದು ಹಾಗೂ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ತಲೆ ತೆಗೆಯುತ್ತೇವೆ ಎಂದು ಹೇಳಿದರು ಎಂದು ಬರೆಸಿರುತ್ತಾರೆ. ಆದರೆ ತಮ್ಮ ಮುಖ್ಯ ವಿಚಾರಣೆಯಲ್ಲಿ ಕೇವಲ ಅವಾಚ್ಯ ಶಬ್ದಗಳಿಂದ ಬೈಯ್ದುರು ಎಂದು ಹೇಳಿಕೆ ನೀಡಿರುತ್ತಾರೆ. ಇನ್ನು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಜೀವ ಬೆದರಿಕೆ ಹಾಕಿರುವುದಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಹೇಳಿಕೆ ನೀಡಿದ್ದರು ಸಹ ಅವಾಚ್ಯ ಶಬ್ದಗಳಿಗೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆದ್ದರಿಂದ ಅಭಿಯೋಜನೆಯ ಅತ್ಯಂತ ಪ್ರಮುಖ ಸಾಕ್ಷಿದಾರರ ಹೇಳಿಕೆಯಲ್ಲಿ ಒಂದಕ್ಕೊಂದು ವ್ಯತಿರಿಕ್ತಯಿಂದ ಕೂಡಿದ್ದು ಅಭಿಯೋಜನೆಯ ಪ್ರಕರಣಕ್ಕೆ ಸಂಶಯವನ್ನು ಉಂಟುಮಾಡುತ್ತದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ.1 ರಿಂದ 5 ಅನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

21. **ಅಂಶ ಸಂ.6:** ಈಗಾಗಲೇ ಈ ಮೇಲಿನ ಅಂಶ 1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

CC-6856-2024

## :ಆದೇಶ:

ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 271(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ 115(1), 118(1), 126(1), 351, 352 ಸಹವಾಚಕ ಕಲಂ.190 ರಡಿಯಲ್ಲಿನ ಅಪರಾಧಗಳಿಂದ ಆರೋಪಿತನನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಯಾಗಿರುವುದರಿಂದ ಸದರಿಯವರ ಮುಚ್ಚಳಿಕೆ ಮತ್ತು ಭದ್ರತೆಗಳನ್ನು ರದ್ದು ಮಾಡಲಾಗಿದೆ.

ಆರೋಪಿತರು ನ್ಯಾಯಾಲಯದ ಇಚ್ಚೆಯಂತೆ ಉನ್ನತ ನ್ಯಾಯಾಲಯದ ಮುಂದೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ಅಥವಾ ಯಾವುದೇ ಅರ್ಜಿಯ ಸಮಯದಲ್ಲಿ ತಿಳುವಳಿಕೆ ಪಡೆದ ನಂತರ ಹಾಜರಾಗಲು ತಲಾ 50,000/- ಮುಚ್ಚಳಿಕೆ ಬರೆದುಕೊಟ್ಟಿದ್ದು ಈ ಮುಚ್ಚಳಿಕೆಯು ಮುಂದಿನ ಆರು ತಿಂಗಳ ಅವಧಿಯವರೆಗೆ ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ 481 ರಡಿಯಲ್ಲಿ ಜಾರಿಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಎಂ.ಓ.-1 : ಒಂದು ಕೋಲು, ಎಂ.ಓ.2 : ಒಂದು ಕಲ್ಲು ಬೆಲೆ ಬಾಳದ ವಸ್ತುಗಳು ಆಗಿರುವುದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿಃ 9 ನೇ ಜುಲೈ, **2026** ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-

**(ಶ್ರೀ ಬೀರಪ್ಪ ಕಾಂಬ್ಳೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ,**
**ಹರಿಹರ.**

**:ಅನುಬಂಧ:**

**:ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ-**

ಪ್ರಾ.ಸಾ.1- ಅಸುಂಡಿ ರುದ್ರಪ್ಪ
ಪ್ರಾ.ಸಾ.2- ನಾಗರಾಜಪ್ಪ
ಪ್ರಾ.ಸಾ.3- ಹರೀಶ
ಪ್ರಾ.ಸಾ.4- ಮಂಜುನಾಥ
ಪ್ರಾ.ಸಾ.5- ಕೆ.ವಿಜಯಕುಮಾರ
ಪ್ರಾ.ಸಾ.6- ನಾಗರಾಜ .ಎಸ್.ಕೆ.

**:ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ-**

ನಿ.ಪಿ.1– ದೂರು,
ನಿ.ಪಿ.1(ಎ)– ಫ್ರಾಸಾ.1 ರವರ ಸಹಿ,
ನಿ.ಪಿ.1(ಬಿ)– ಫ್ರಾಸಾ.5 ರವರ ಸಹಿ,
ನಿ.ಪಿ.2–ಕೃತ್ಯ ಸ್ಥಳದ ಪಂಚನಾಮೆ,
ನಿ.ಪಿ.2(ಎ)– ಫ್ರಾಸಾ.1 ರವರ ಸಹಿ,
ನಿ.ಪಿ.2(ಬಿ)– ಫ್ರಾಸಾ.2 ರವರ ಸಹಿ,
ನಿ.ಪಿ.2(ಸಿ)– ಫ್ರಾಸಾ.4 ರವರ ಸಹಿ,
ನಿ.ಪಿ.–3&4– ಛಾಯಾಚಿತ್ರಗಳು,
ನಿ.ಪಿ.–5– ನೋಟೀಸ್,
ನಿ.ಪಿ.5(ಎ)– ಫ್ರಾಸಾ.4 ರವರ ಸಹಿ,
ನಿ.ಪಿ.5(ಬಿ)– ಫ್ರಾಸಾ.5 ರವರ ಸಹಿ,
ನಿ.ಪಿ.6–ಪ್ರಥಮ ವರ್ತಮಾನ ವರದಿ,
ನಿ.ಪಿ.6(ಎ)– ಫ್ರಾಸಾ.5 ರವರ ಸಹಿ,
ನಿ.ಪಿ.7– ಕಲಂ. 63(4) ರ ಅಡಿ ಪ್ರಮಾಣ ಪತ್ರ,
ನಿ.ಪಿ.7(ಎ)– ಫ್ರಾಸಾ.5 ರವರ ಸಹಿ,
ನಿ.ಪಿ.8– ಗಾಯದ ಪ್ರಮಾಣ ಪತ್ರ,
ನಿ.ಪಿ.8(ಎ)– ಫ್ರಾಸಾ.5 ರವರ ಸಹಿ,
ನಿ.ಪಿ.8(ಸಿ)– ಫ್ರಾಸಾ.1 ರವರ ಸಹಿ,

CC-6856-2024

**ಅಭಿಯೋಜನೆಯವರ ಪರ ಮುದ್ದೆಮಾಲುಗಳ ಪಟ್ಟಿ-**

ಎಂ.ಓ.-1 : ಒಂದು ಕೋಲು
ಎಂ.ಓ.2 : ಒಂದು ಕಲ್ಲು

**:ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು-ಇಲ್ಲ**

**:ಆರೋಪಿಯ ಪರ ದಾಖಲೆಗಳ ಪಟ್ಟಿ-ಇಲ್ಲ**

ಸಹಿ/-
**(ಶ್ರೀ** ಬೀರಪ್ಪ ಕಾಂಬ್ಳೆ**)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ.ದ.ನ್ಯಾದಂ.ನ್ಯಾಯಾಲಯ,**
**ಹರಿಹರ.**